ವನ್ನೂ ಪರಿಶೀಲನೆ ಮಾಡಿ ಅಲ್ಲಿ ಅವಶ್ಯಕತೆ ಇದೆ ಎಂದು ಕಂಡುಬಂದುದರಿಂದ ಪ್ರಾರಂಭ ಮಾಡಿದ್ದೇವೆ. ಒಂದು ವೇಳೆ ಅವಶ್ಯಕತೆ ಇಲ್ಲವೆಂದು ಈಗ ಕಂಡು ಬಂದರೆ ಅದನ್ನು ನಾವು ಮುಚ್ಚಲಿಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಕಾಗೋಡು ತಿಮ್ಮಪ್ಪ.— ಒಂದು ಶಾಲೆಯಲ್ಲಿ ಕನಿಷ್ಟ ಪಕ್ಷ 35 ಹುಡುಗರಾದರೂ ಇರಬೇಕೆಂದು ವಿದ್ಯಾ ಇಲಾಖೆಯ ಆಜ್ಞೆ ಇರುವುದನ್ನು ತಾವು ಒಪ್ಪಿಕೊಳ್ಳುವಾಗ ನಮ್ಮ ರಾಜ್ಯದಲ್ಲಿ ಯಾವ ಯಾವ ಶಾಲೆಗಳಲ್ಲಿ 35 ಹುಡುಗರಿಗಿಂತ ಕಡಿಮೆ ಸಂಖ್ಯೆಯಲ್ಲದ್ದರೆ ಅಂಥ ಶಾಲೆಗಳನ್ನು ತೆಗೆಯಬೇಕು.

ಅಧ್ಯಕ್ಷರು.—ಅವಶ್ಯಕತೆ ಇರುವಂಥ ಕಡೆಗಳಲ್ಲಿ ಶಾಲೆಗಳನ್ನು ಕೊಟ್ಟಿರುತ್ತಾರೆ. ಕೊಡದಿದ್ದರೆ ಕೊಡಲಿಲ್ಲವೆಂದು ಹೇಳುತ್ತೀರಿ. ಕೊಟ್ಟರೆ ಕೊಟ್ಟಿದ್ದಾರೆಂದು ಹೇಳಿದರೆ ಹೇಗೆ ?

ಶ್ರೀ ಕಾಗೋಡು ತಿಮ್ಮಪ್ಪ.—ಒಂದು ಕಣ್ಣಿಗೆ ಸುಣ್ಣ, ಮತ್ತೊಂದು ಕಣ್ಣಿಗೆ ಬೆಣ್ಣೆ ಆಗಬಾರದೆನ್ನುವ ದೃಷ್ಟಿಯಿಂದ ನಾನು ಹೇಳಿದ್ದು. ಸರ್ಕಾರದ ನೀತಿ ಏನಿದೆ ಅದರಂತೆ ನಡೆಯಬೇಕೆಂದು ನಾನು ಹೇಳಿದ್ದು.

ಶ್ರೀ ಎ ಜಿ. ಕೊಡಗಿ.—ಇವತ್ತು ಕೆಲವು ಕಡೆಗಳಲ್ಲಿ ಕಟ್ಟಡ ಇಲ್ಲದೇನೇ ಸಣ್ಣ ಸಣ್ಣ ಗುಡಿಸಲುಗಳಲ್ಲಿ, ಇನ್ನು ಯಾರದೋ ಮನೆಗಳಲ್ಲಿ ಹೈಸ್ಕೂಲ್‌ಗಳನ್ನು ನಡೆಸಬೇಕಾದಂಥ ಪರಿಸ್ಥಿತಿಗೆ ಒಳಗಾಗಿರುವುದರಿಂದ, ಅಂಥ ಕಡೆಗಳಿಗೆ ಕೂಡಲೇ ಕಟ್ಟಡವನ್ನು ಒದಗಿಸುವುದಕ್ಕೆ ಏನಾದರೂ ಕಾರ್ಯಕ್ರಮವನ್ನು ಹಾಕಿಕೊಳ್ಳುತ್ತೀರಾ ಸ್ವಾಮಿ ?

ಶ್ರೀ ಕೆ. ಟಿ. ರಾಥೋಡ್.—ಈಗ ಅಲ್ಲಿರುವಂಥ ಹೈಸ್ಕೂಲ್‌ಗಳು ಒಟ್ಟು 18. ಅದರಲ್ಲಿ 10 ಹೈಸ್ಕೂಲ್‌ಗಳಿಗೆ ಕಟ್ಟಡಗಳಿವೆ ಎಂಬುದನ್ನು ತೋರಿಸಿದ್ದೇವೆ. ಇನ್ನು 3 ಹೊಸ ಹೈಸ್ಕೂಲ್‌ಗಳನ್ನು ಹೋದ ವರ್ಷ ಪ್ರಾರಂಭ ಮಾಡಿದ್ದೇವೆ. ಪ್ರಾರಂಭ ಮಾಡುವಾಗ ವಿದ್ಯಾ ಇಲಾಖೆಯವರ ನಿಯಮಗಳಿಗನುಸಾರವಾಗಿಯೇ ಪ್ರಾರಂಭ ಮಾಡಿದ್ದೇವೆ. ಅಲ್ಲಿ ನಾವು ಹೈಸ್ಕೂಲ್‌ಗಳನ್ನು ಪ್ರಾರಂಭ ಮಾಡುವಾಗ ಸಾರ್ವಜನಿಕ ಕ್ಷೇತ್ರದಲ್ಲಿ ಕೆಲಸ ಮಾಡುವಂಥ ಮಹನೀಯರು ಬಿಲ್ಡಿಂಗ್‌ನ್ನು ಒದಗಿಸಿಕೊಡುತ್ತೇವೆ, ಎಲ್ಲಾ ಅನುಕೂಲತೆಗಳನ್ನು ಮಾಡಿಕೊಡುತ್ತೇವೆಂದು ಹೇಳಿದುದರಿಂದ ನಾವು ಅಲ್ಲಿಗೆ ಹೈಸ್ಕೂಲ್‌ನ್ನು ಸ್ಯಾಂಕ್ಷನ್ ಮಾಡಿರುತ್ತೇವೆ. ಅಲ್ಲಿಗೆ ಹೈಸ್ಕೂಲ್ ಸ್ಯಾಂಕ್ಷನ್ ಆದ ಮೇಲೆ ಕಟ್ಟಡ ಕೊಡಬೇಕೆಂದು ಹೇಳುವುದು ಒಂದು ವಿಚಾರ. ಹೀಗಿದ್ದಾಗ್ಯೂ ಕೂಡ ಅಲ್ಲಿಗೆ ಕಟ್ಟಡವನ್ನು ಒದಗಿಸಿ ಕೊಡಬಾರದೆಂದು ಏನೂ ಸರ್ಕಾರದ ಉದ್ದೇಶವಿಲ್ಲ. ನಮ್ಮ ಆರ್ಥಿಕ ಪರಿಸ್ಥಿತಿಯು ಮುಗ್ಗಟ್ಟಿನಿಂದ ನಮ್ಮ ಕಾರ್ಯಕ್ರಮ ಸ್ವಲ್ಪ ಮುಂದಕ್ಕೆ ಹಾಕಬೇಕಾಗುತ್ತದೆ.

Question No. 362 (*Contd.*)

ಶ್ರೀ ಡಿ. ದೇವರಾಜ್ ಅರಸ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು 172 ನೇ ಪ್ರಶ್ನೆಗೆ ಹೆಚ್ಚಿನ ವಿವರಣೆಯನ್ನು ಕೇಳಿದ್ದರು, ಅದಕ್ಕಾಗಿ ತಮ್ಮ ಅಪ್ಪಣೆಯಮೇರೆಗೆ ನಾನು ಈಗ ಪುನಃ ಉತ್ತರವನ್ನು ನೀಡುತ್ತಿದ್ದೇನೆ.

ಕ್ಯಾಬಿನೆಟ್ ಡಿಸಿಷನ್ ಆದಹಾಗೆ ಇಲ್ಲ. ಮುಖ್ಯಮಂತ್ರಿಗಳು, ಮಂತ್ರಿಗಳು ಸೇರಿ ಚೆಕ್ನಿಕಲ್ ಅಡ್ವೈಜ್ ತೆಗೆದುಕೊಂಡು ಅದರ ಪ್ರಕಾರ ಉತ್ತರವನ್ನು ಕೊಟ್ಟು ಬಿಟ್ಟಿದ್ದಾರೆ. ಫೀಜಿಬಲಟಿ ಪ್ರಶ್ನೆ ಬಂದಿಲ್ಲ. ಕೊಯ್ನಾ ವಾಟರ್ಸ್ ಬೊಂಬಾಯಿ ಪ್ರಾಂತ್ಯಕ್ಕೆ ಸೇರಿದ್ದು. 1951ನೇ ಇಸವಿಯ ಪ್ಲಾನಿಂಗ್ ಕಮಿಷನ್ ಅವಾರ್ಡ್‌ನ್ನು ಕೊಯ್ನಾ ವಾಟರ್‌ನ್ನು ಹೇಗೆ ಉಪಯೋಗ ಮಾಡಬೇಕೆಂದು ಇದೆ. ಅದರ ಪ್ರಕಾರ 46 ಟಿ.ಎಂ.ಸಿ.ಎಫ್ ಟಿ. ನೀರು ನಮ್ಮ ಉಪಯೋಗಕ್ಕೆ ಬರುತ್ತದೆ ಎಂದು ಇತ್ತು. ಕೊಯ್ನಾ ಪ್ರಾಜೆಕ್ಟ್ ಬೇಗ ಬಂದುದರಿಂದ we reserve our right and yet allow you to go ahead with your construction of the dam. ಎಂದು ಹೇಳಿದ್ದಾರೆ. ಇಷ್ಟು ವಿಚಾರ, ಚೆಕ್ನಿಕಲ್ ಆಗಿ ಅವರು ಅಭಿಪ್ರಾಯ ಕೊಟ್ಟರು. ಚೆಕ್ನಿಕಲ್ ಇಂಜಿನಿಯರ್ಸ್ ಜೊತೆಗೆ ಸಹ ಚರ್ಚೆ ಮಾಡಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ.—ಮಹಾರಾಷ್ಟ್ರ ಸರ್ಕಾರದವರು ಕರ್ನಾಟಕ ಸರ್ಕಾರದವರನ್ನು ಕೇಳಿದರೂ ಸಹ ಸೇರದೆ ಇದ್ದುದಕ್ಕೆ ಕಾರಣವೇನು ? ಇದರಿಂದ ನಮ್ಮ ಕರ್ನಾಟಕ ರಾಜ್ಯಕ್ಕೆ ಧಕ್ಕೆ ಬಂದಂತೆ ಆಗಲಿಲ್ಲವೇ ? ಮತ್ತು ಇದು ಕ್ಯಾಬಿನೆಟ್‌ನಲ್ಲಿ ತೀರ್ಮಾನವಾಗಿರಲಿಲ್ಲ ; ಕೇವಲ ಮಂತ್ರಿಗಳ ಮಟ್ಟದಲ್ಲಿ ತೀರ್ಮಾನವಾಗಿತ್ತು ; ಮಂತ್ರಿಗಳ ಮಟ್ಟದಲ್ಲಿ ಆದ ತೀರ್ಮಾನ ಸರ್ಕಾರದ ತೀರ್ಮಾನವಾಗುತ್ತದೆಯೇ ?

ಶ್ರೀ ಡಿ. ದೇವರಾಜ ಅರಸ್.—ಕ್ಯಾಬಿನೆಟ್‌ನಲ್ಲಿ ತೀರ್ಮಾನವಾಗದಿದ್ದರೂ ಸಹ ಮುಖ್ಯ ಮಂತ್ರಿಗಳು ಮತ್ತು ಸಂಬಂಧಪಟ್ಟ ಮಂತ್ರಿಗಳು ಕೂಡಿಕೊಂಡು ತೀರ್ಮಾನ ತೆಗೆದುಕೊಂಡರೆ ಅದು ಸರ್ಕಾರದ ತೀರ್ಮಾನವಾಗುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ.—ಆಗ ಮುಖ್ಯಮಂತ್ರಿಗಳು ಯಾರಿದ್ದರು ?

ಶ್ರೀ ಡಿ. ದೇವರಾಜ ಅರಸ್.—ಶ್ರೀಮಾನ್ ಜತ್ತಿಯವರು ಮುಖ್ಯಮಂತ್ರಿಯಾಗಿದ್ದರು ಮತ್ತು ಮಾನ್ಯ ಚನ್ನಬಸಪ್ಪನವರು ಲೋಕೋಪಯೋಗಿ ಇರಿಗೆ ಮಂತ್ರಿಯಾಗಿದ್ದರು.

ಶ್ರೀ ಕಾಗೋಡು ತಿಮ್ಮಪ್ಪ.—ಕರ್ನಾಟಕ ಸರ್ಕಾರದವರು ಸಹ ಆ ಪ್ರಾಜೆಕ್ಟ್ ಜೊತೆಗೆ ಸೇರಿದ್ದರೆ ಬಹುಶಃ ಬಿಜಾಪುರ ಜಿಲ್ಲೆಗೆ ಸ್ವಲ್ಪ ಪ್ರಮಾಣದಲ್ಲಿ ನೀರನ್ನು ಒದಗಿಸಿ ಅಲ್ಲಿಯ ಈಗಿನ ಬರಗಾಲವನ್ನು ನಿವಾರಣೆ ಮಾಡುವುದಕ್ಕೆ ಸಾಧ್ಯವಾಗುತ್ತಿರಲಿಲ್ಲವೇ ?

ಶ್ರೀ ಡಿ. ದೇವರಾಜ ಅರಸ್.—ಸಾಧ್ಯವಾಗುತ್ತಿತ್ತು. ಅದು ನಿಜ. ನಾವು ಸೇರದೇ ಇದ್ದರೂ ಸಹ ನಮ್ಮ ರೈಟ್ಸ್ ಇದ್ದೇ ಇದೆ.

ಶ್ರೀ ಕಾಗೋಡು ತಿಮ್ಮಪ್ಪ.—ಎಲ್ಲಿದೆ ?

Sri D. DEVARAJ URS.—Mysore actually wanted to utilise the quantity of water that was proposed to be utilised for irrigation in Bijapur when it was part of Bombay District and the quantity of water was about 46 T.M.Cft out of 58 T.M.cft of Koyana Project under the Planning Commission award of 1961. The Mysore State have reserved the right to the utilisation of Krishna Waters to the extent of 46 TMCft for the purpose of the irrigation in Mysore State and to an additional share in the balance of 12 T.M. cft which is estimated to be available. ಇವು ಎಲ್ಲಾ ಚೆಕ್ನಿಕಲ್ ಒಪೀನಿಯನ್ಸ್ ಆಗಿವೆ.

ಶ್ರೀ ಪಿ. ಎಂ. ಬಂಗಿ.—195 ನೇ ಇಸವಿಯಲ್ಲಿ ರಾಜ್ಯ ಪುನರ್ವಿಂಗಡಣೆಯಾದಮೇಲೆ ಅಪ್ಪರ್ ಕೃಷ್ಣಾ ಯೋಜನೆಯಿಂದ ಬಿಜಾಪುರ ಜಿಲ್ಲೆಗೆ ಯಾವ ಉಪಯೋಗವೂ ಇಂದಿನವರೆಗೆ ಆಗಿಲ್ಲ ; ಪರಿಸ್ಥಿತಿ ಈ ರೀತಿ ಇದ್ದರೂ ಸಹ ಕೊಯ್ನಾ ನದಿ ನೀರಿನ ಬಗ್ಗೆ ನಮ್ಮ ಹಕ್ಕನ್ನು ರಿಜರ್ವ್ ಮಾಡಿ ಕೊಂಡಿದ್ದೇವೆಂದು ತಾವು ತಮ್ಮ ಉತ್ತರದಲ್ಲಿ ಹೇಳಿದ್ದೀರಿ. ಈಗ ಕೊಯ್ನಾ ನದಿಯ ನೀರು ಪಶ್ಚಿಮ ದಿಕ್ಕಿನಲ್ಲಿ ಹರಿದು ಸಮುದ್ರಕ್ಕೆ ಸೇರುತ್ತಿದೆ. ಅದನ್ನು ಪೂರ್ವ ಭಾಗಕ್ಕೆ ತಿರುಗಿಸಿದರೆ ಬಿಜಾಪುರ ಜಿಲ್ಲೆಗೆ ಅನುಕೂಲವಾಗುತ್ತದೆ. ಈ ಬಗ್ಗೆ ಸರ್ಕಾರದವರು ಪ್ರಯತ್ನ ಮಾಡಬೇಕೆಂದು ಸೂಚನ ಬಯಸುತ್ತೇನೆ. ಹಾಗೆ ಮಾಡುತ್ತಾರೆಯೇ ?

ಶ್ರೀ ಡಿ. ದೇವರಾಜ ಅರಸ್.—ತಾವು ಕೇಳುವುದು ನರಿ. ನಮಗೆ ಬಿಜಾಪುರದ ಜನತೆಯ ಕಷ್ಟ ಗೊತ್ತಿದೆ. ಆದರೆ ಏನು ಮಾಡುವುದಿದೆ ? ಕೃಷ್ಣಾ ವಾಟರ್ ವಿಚಾರದಲ್ಲಿ ಟ್ರಿಬ್ಯುನಲ್ ಮುಂದೆ ಸಹ ಹೋಗಿದ್ದು ಆಯಿತು. ಆದರೂ ನಮಗೆ ನ್ಯಾಯ ಸಿಗಲಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ಬೇರೆ ಯವರು ಆಹ್ವಾನ ಕೊಟ್ಟಾಗ ತಾವು ಕಣ್ಣುಮುಚ್ಚಿ ಕೊಂಡು ನುಮ್ಮನೆ ಕುಳಿತಿರಿ. ಆಗ ತಾವು ಒಪ್ಪಿದ್ದರೆ ಮಾನ್ಯ ಎಸ್. ಬೈ. ಪಾಟೀಲರು ಇಂದು ಆಗಾಗ್ಗೆ ಇಂಡಿ ಮತ್ತು ಸಿಂದಗಿ ವಿಚಾರ ಹೇಳುವುದು ತಪ್ಪುತ್ತಿತ್ತು ; ಆ ಭಾಗದಲ್ಲಿ ಇಂದು ಬರಗಾಲ ಬಂದಿರುವುದಕ್ಕೆ ನಿಮ್ಮ ಸಹೋದ್ಯೋಗಿ ಶ್ರೀಮಾನ್ ಚನ್ನಬಸಪ್ಪನವರೇ ಕಾರಣರು ಎಂದು ಗೊತ್ತಾಗುತ್ತದೆ. ಆದರೂ ತಾವು ಅವರನ್ನು ತಮ್ಮ ಮಂತ್ರಿಮಂಡಲದಲ್ಲಿ ಇಟ್ಟುಕೊಂಡಿದ್ದೀರಿ.

Sri P. M. BANGI.—He says we have reserved the right to claim our share.

Sri KAGODU THIMMAPPA.—You kept quiet without doing anything when the chance came.

ಶ್ರೀ ಡಿ. ದೇವರಾಜ ಅರಸ್.—ಆಗಿನ ಕಾಲದಲ್ಲಿ ಚೆಕ್ನಿಕಲ್ ಒಪೀನಿಯನ್ ಪ್ರಕಾರ ಅವರು ಆ ತೀರ್ಮಾನ ತೆಗೆದುಕೊಂಡಿದ್ದು ನರಿ ಇರಬಹುದು ; ಹಿಂದೆ ನ್ಯಾಯವಿಧಾಯಕ ಸಭೆ ಇದ್ದಾಗ ಮಾನ್ಯ ಸದಸ್ಯರೊಬ್ಬರು ಹೇಳುತ್ತಿದ್ದರು ; ಏನೆಂದರೆ, ಬ್ರಿಟೀಷರು ಹೋಗುವಾಗ ನಮ್ಮನ್ನು

ಹೇಳದೆ ಕೇಳದೆ ಹೋಗುತ್ತಾರೆಂದು ನಮಗೇನು ಗೊತ್ತಿತ್ತು ಎಂದು. ಅದೇರೀತಿ ಕೃಷ್ಣಾ ವಾಟರ್ ವಿಚಾರದಲ್ಲಿ ಟ್ರಿಬ್ಯುನಲ್ ಮುಂದೆ ಹೋದಾಗ ಅವರು ಈ ರೀತಿ ಮಾಡುತ್ತಾರೆಂದು ಯಾರು ಕಂಡಿದ್ದರು ? ಮತ್ತು ಅಂದಿನ ಸರ್ಕಾರದವರಿಗೆ ಏನು ಗೊತ್ತಿತ್ತು ?

MADAM SPEAKER.—Now Questions are over.

QUESTION FOR ANSWERS ON THE DAY
(But not taken)

Establishment of Sweet Oil Corporation, Famine Relief Board and Dry Land Improvement Board.

31. M. M. SAJJAN (Muddebihal).—

Will the Chief Minister be pleased to state :—

(*a*) the names of the State Level Corporations, Committees and Boards now existing in the State ;

(*b*) the names of Chairman of each of such Corporations, Committees and Boards during the years 1970–71, 1971–72 and 1972-73 ;

(*c*) whether there is any proposal before the Government to establish Sweet Oil Corporation ;

(*d*) if so, when ; if not, the reasons for the same ;

(*e*) whether there is any proposal before Government to establish a State Level Famine Relief Board;

(*f*) whether Government has received any suggestions to establish a dry land improvement Board ?

Sri D. DEVARAJ URS (Chief Minister).—

(*a*) and (*b*) *Vide* statement placed on the Table of the House.*

(*c*) No.

(*d*) The need for establishing such a Corporation has not been felt.

(*e*) No.

(*f*) No.

Diversion roads in Submersion area of Tungabhadra

54. Sri K. H. KURDAGI (Mundargi).—

Will the Chief Minister be pleased to state :—

(*a*) the length of the diveresion road formed by the Board to the Tungabhadra submersion area ;

*Copy placed in Karnataka Legislature Library *vide* No. 25 dated 3rd September 1974.